# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 11340/2019

| | |
|---|---|
| ಸಾಕ್ಷಿದಾರರ ಹೆಸರು : | ಶಾಂತಕುಮಾರ ಟಿ. |
| ತಂದೆಯ ಹೆಸರು : | ಎ. ತಿಮ್ಮಯ್ಯ |
| ವಯಸ್ಸು : | 66 ವರ್ಷ |
| ಉದ್ಯೋಗ : | ನಿವೃತ್ತ ಪಿ.ಎಸ್.ಐ |
| ವಾಸ : | ಕೋರಮಂಗಲ, ಬೆಂಗಳೂರು. |

**ದಿನಾಂಕ 26/03/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ ರವರಿಂದಃ**

1. ನಾನು 2013 ರಿಂದ 2019 ರವರೆಗೆ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 24/01/2019 ರಂದು ನಾನು ಠಾಣಾ ಕರ್ತವ್ಯದಲ್ಲಿರುವಾಗ ರಾತ್ರಿ 09.15 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಪ್ರಕರಣವನ್ನು ದಾಖಲಿಸಿ, ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ-11 ರವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ.

3. ಸಾಕ್ಷಿಯು ದೂರು ಮತ್ತು ದೂರಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ದೂರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು**. ಸಾಕ್ಷಿಯು ಪ್ರ.ವ ವರದಿಯನ್ನು ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಪ್ರ.ವ ವರದಿಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.**

**ಪಾಟೀ ಸವಾಲುಃ 4ನೇ ಆರೋಪಿ ಪರ ವಕೀಲರಿಂದಃ**

4. ದೂರು ಸ್ವೀಕರಿಸಿದ ನಂತರ ನಾನು ಪ್ರಾಥಮಿಕ ಪರಿಶೀಲನೆ ಮಾಡಿಲ್ಲ. ಚಾಸಾ-1 ರವರಿಗೆ ಕನ್ನಡ ಓದಲು ಬರೆಯಲುಬರುತ್ತದೆಯೋ ಇಲ್ಲವೋ ಎಂದು ನಾನು ಕೇಳಲಿಲ್ಲ, ಆದರೆ ದೂರಿನ ಅಂಶಗಳನ್ನು ಅವರಿಗೆ ವಿವರಿಸಿ ಹೇಳಿದ್ದೇನೆ. ದೂರನ್ನು ಚಾಸಾ-1 ರವರೇ ಕಂಪ್ಯೂಟರ್ ನಲ್ಲಿ ಮುದ್ರಿಸಿಕೊಂಡು ಬಂದಿದ್ದರು. ದೂರನ್ನು ನಾನೇ ಸ್ವತಃ ಟೈಪ್ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಾಥಮಿಕ ಪರಿಶೀಲನೆ ಮಾಡದೇ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 3 ಮತ್ತು 5 ನೇ ಆರೋಪಿತರ ಪರ ವಕೀಲರಿಂದಃ ವಕೀಲರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**
**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.